


## ಸಮಾಚಾರ ಸಣ್ಣದಲ್ಲ

### ಎದೆ ನೋವು: ಚಿಕಿತ್ಸೆ ಪಡೆದ ಜಮೀರ್

**ಚಿತ್ರದುರ್ಗ:** ಚುನಾವಣಾ ಪ್ರಚಾರಕ್ಕೆ ಆಗಮಿಸಿದ್ದ ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಅವರಿಗೆ ಎದೆ ನೋವು



ಕಾಣಿಸಿಕೊಂಡಿದ್ದರಿಂದ ಇಲ್ಲಿನ ಬಸವೇಶ್ವರ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಸೋಮವಾರ ಚಿಕಿತ್ಸೆ ಪಡೆದರು. ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಜಮೀರ್ ಆರೋಗ್ಯ ಪರೀಕ್ಷಿಸಲಾಗಿದ್ದು, ಇಕೊ, ಇಸಿಜಿ, ರಕ್ತ ಪರೀಕ್ಷೆ ನಡೆಸಲಾಗಿದೆ. ಆರೋಗ್ಯ ಸ್ಥಿರವಾಗಿರುವುದನ್ನು ಖಚಿತಪಡಿಸಿದ ವೈದ್ಯರು, ವಿಶ್ರಾಂತಿಗೆ ಸಲಹೆ ನೀಡಿ ಆಸ್ಪತ್ರೆಯಿಂದ ಬಿಡುಗಡೆಗೊಳಿಸಿದರು. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಬಿ.ಎನ್. ಚಂದ್ರಪ್ಪ ಪರ ಮತಯಾಚನೆಗೆ ಜಮೀರ್ ಅವರು ಸೋಮವಾರ ಜಿಲ್ಲೆಗೆ ಆಗಮಿಸಿದ್ದರು. ನಗರದ ಉಮಾಪತಿ ಕಲ್ಯಾಣ ಮಂಟಪದಲ್ಲಿ ಸಂಜೆ ಪ್ರಚಾರ ಸಭೆ ಆಯೋಜಿಸಲಾಗಿತ್ತು. ಸಭೆಗೆ ತೆರಳುವ ಮುನ್ನವೇ ಜಮೀರ್ ಆರೋಗ್ಯದಲ್ಲಿ ಏರುಪೇರು ಉಂಟಾಗಿತ್ತು.

### ಯತ್ನಾಳಗೆ ತಾಕತ್ತಿದ್ದರೆ ಈಗಲೇ ಸ್ಪರ್ಧೆಗೆ ಬರಲಿ

**ವಿಜಯಪುರ:** ನನ್ನ ವಿರುದ್ಧ ಶಿವಾನಂದ ಪಾಟೀಲ ಕ್ಷೇತ್ರ ಮರು ವಿಂಗಡಣೆ ಬಳಿಕ ತಾಕತ್ತಿದ್ದರೆ ಸ್ಪರ್ಧಿಸಲಿ



ಎಂದು ಯತ್ನಾಳ ಹೇಳಿದ್ದಾರೆ. ಆದರೆ ಕ್ಷೇತ್ರ ಮರು ವಿಂಗಡಣೆವರೆಗೆ ಕಾಯುವುದು ಬೇಡ, ತಾಕತ್ತಿದ್ದರೆ ಈಗಲೇ ನನ್ನ ವಿರುದ್ಧ ಸ್ಪರ್ಧೆಗೆ ಸಿದ್ಧವಾಗಲಿ ಎಂದು ಸಚಿವ ಶಿವಾನಂದ ಪಾಟೀಲ ಪ್ರತಿಸವಾಲು ಹಾಕಿದ್ದಾರೆ.ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ ಬಾರಿ ಲೋಕಸಭಾ ಚುನಾವಣೆ ಕ್ಷೇತ್ರ ಮರುವಿಂಡಣೆ ಆಗಲಿದ್ದು, ಆಗ ನನ್ನ ವಿರುದ್ಧ ಶಿವಾನಂದ ಪಾಟೀಲ ಗಂಡಸಿದ್ದರೆ ಸ್ಪರ್ಧೆ ಮಾಡಲಿ. ಬಸನಗೌಡ ಪಾಟೀಲ ಯತ್ನಾಳ ಯಾವ ರೀತಿ ಬಿಸಿನೆಸ್ ಮಾಡುತ್ತಾರೆ, ಸೌಹಾರ್ದದಲ್ಲಿ ಯಾವ ಬಿಸಿನೆಸ್ ಮಾಡಿದ್ದಾರೆಂದು ಮಾಹಿತಿ ಪಡೆಯಿರಿ ಎಂದ ಸಚಿವ ಶಿವಾನಂದ, ನನ್ನ ವಿರುದ್ಧ ಮಾಡುವ ಆರೋಪಕ್ಕೆ ದಾಖಲೆ ಇದ್ದರೆ ಕೊಡಲಿ. ವಿಜಯಪುರ ನಗರ ಶಾಸಕನಾಗಿ ಯತ್ನಾಳ ಮಾಡಿರುವ ಅಭಿವೃದ್ಧಿ ಏನು?. ಕೇಂದ್ರದಲ್ಲಿ ಸಚಿವರಾಗಿದ್ದಾಗಲೂ ಯತ್ನಾಳ ಏನೂ ಅಭಿವೃದ್ಧಿ ಮಾಡಲಿಲ್ಲ ಎಂದು ಟೀಕಿಸಿದರು.

### ರೈತ ಪರ ಕಾಯಿದೆ ಜಾರಿಗೆ ಕಾಂಗ್ರೆಸ್ ಬೆಂಬಲಿಸಿ

**ನಾಗಮಂಗಲ:** ರೈತ ಉತ್ಪನ್ನಗಳ ಮೇಲಿನ ಜಿಎಸ್‌ಟಿ ತೆಗೆಯುವುದು, ಕನಿಷ್ಠ ಬೆಂಬಲ ಬೆಲೆ, ಸಾಲ ಮನ್ನಾ ಸೇರಿದಂತೆ ಹತ್ತು ಹಲವು ರೈತಪರ ಯೋಜ



ನೆಗಳನ್ನು ರಾಷ್ಟ್ರೀಯ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದೆ. ರೈತಪರ ಕಾಯಿದೆ ಜಾರಿಗಾಗಿ ಮತದಾರರು ಕಾಂಗ್ರೆಸ್ ಅನ್ನು ಬೆಂಬಲಿಸಬೇಕು ಎಂದು ಕೃಷಿ ಸಚಿವರಾದ ಚಲುವರಾಯಸ್ವಾಮಿ ಅವರು ಹೇಳಿದರು. ನಾಗಮಂಗಲ ತಾಲೂಕಿನ ನಾನಾ ಗ್ರಾಮ ಪಂಚಾಯತಿಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಪರ ಮತ ಪ್ರಚಾರದಲ್ಲಿ ತೊಡಗಿದ್ದ ಸಂದರ್ಭದಲ್ಲಿ ಮಾತನಾಡಿ, ಶಾಶ್ವತವಾಗಿ ಕೊಬ್ಬರಿ ಖರೀದಿ, ಮಹಿಳೆಯರಿಗೆ ಪ್ರತಿ ವರ್ಷ 1 ಲಕ್ಷ, ಬೆಂಬಲ ಬೆಲೆ ಸೇರಿದಂತೆ ನಾನಾ ಗ್ಯಾರಂಟಿಗಳ ಭರವಸೆಗಳನ್ನು ಕಾಂಗ್ರೆಸ್ ನೀಡಿದ್ದು ಇದನ್ನು ಅನುಷ್ಠಾನಕ್ಕೆ ತರಲು ಕಾಂಗ್ರೆಸ್ ಅನ್ನು ಬೆಂಬಲಿಸಬೇಕು.ಚುನಾವಣೆಯಲ್ಲಿ ಕಾಂಗ್ರೆಸ್ ಗ್ಯಾರಂಟಿ ಕೈ ಹಿಡಿಯಲಿವೆಯೇ ಹೊರತು ಮೋದಿ ಗ್ಯಾರಂಟಿ ಏನು ವರ್ಕ್ ಆಗಲ್ಲ. ರಾಜ್ಯಕ್ಕೆ ಐದು ಗ್ಯಾರಂಟಿಗಳನ್ನು ನೀಡಿದ್ದೇವು. ಈಗ ರಾಷ್ಟ್ರವ್ಯಾಪಿ ಗ್ಯಾರಂಟಿಗಳನ್ನು ಘೋಷಣೆ ಮಾಡಲಾಗಿದೆ ಎಂದರು.

### ರಾಜ್ಯಕ್ಕೆ ಮೋದಿ ಕೊಡುಗೆ ಕುರಿತು ಚರ್ಚೆಯಾಗಲಿ

**ಯಾದಗಿರಿ:** ಮೋದಿ ಮುಖ ನೋಡಿ ಮತ ಹಾಕಿ ಎನ್ನುತ್ತಾರೆ ಹಾಗಾದರೆ ರಾಜ್ಯಕ್ಕೆ ಮೋದಿ ಕೊಡುಗೆಯೇನು ಎನ್ನುವ ಕುರಿತು ಬಹಿರಂಗ ಚರ್ಚೆ ನಡೆ



ಯಲಿ ಅದಕ್ಕೆ ನಾನು ಸಿದ್ಧ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ಸವಾಲು ಹಾಕಿದ್ದಾರೆ. ಕೆಂಭಾವಿ ಪಟ್ಟಣದಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿರುವ ಅವರು, ಪ್ರಧಾನಿ ನರೇಂದ್ರ ಮೋದಿಯವರ ಅಭಿವೃದ್ಧಿ ಕಾರ್ಯಗಳು ಮತ್ತು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಭಿವೃದ್ಧಿ ಕಾರ್ಯಗಳ ಕುರಿತು ಚರ್ಚೆಯಾಗಲಿ ಅದರಲ್ಲಿ ಸಿದ್ದರಾಮಯ್ಯ ಅವರ ಕಾರ್ಯಗಳು ಹೇಳುತ್ತಾ ಹೋದರೆ ಒಂದು ದಿನ ಸಾಲದು ಅದರಂತೆ ಬಿಜೆಪಿಯವರು 5 ಕೆಲಸಗಳು ಹೇಳಲಿ ಸಾಕು ಎಂದು ಕೇಸರಿ ಪಾಳಯದ ವಿರುದ್ಧ ಗುಡುಗಿದರು.ಮೋದಿ ಅಧಿಕಾರಕ್ಕೆ ಬಂದಾಗಲಿನಿಂದ ಸುಳ್ಳು ಹೇಳುತ್ತಾ ಬಂದಿದ್ದಾರೆ ವಿನಃ ಯಾವುದೇ ಹೇಳಿಕೊಳ್ಳುವ ಅಭಿವೃದ್ಧಿ ಮಾಡಿಲ್ಲ ಇಂತಹವರ ಮುಖ ನೋಡಿ ಯಾಕೆ ವೋಟ್ ಹಾಕಬೇಕು. ಈಗಾಗಲೇ ರಾಜ್ಯ ಸರಕಾರದ ಜನಪರ ಯೋಜನೆಗಳು ಮನೆ ಮನಗಳನ್ನು ತಲುಪಿವೆ. ಹೀಗಾಗಿ ಬಿಜೆಪಿ ಭಯಗೊಂಡು ಜೆಡಿಎಸ್‌ನೊಂದಿಗೆ ಮೈತ್ರಿ ಮಾಡಿಕೊಂಡಿದ್ದಾರೆ ಎಂದರು.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆ್ಯಪ್

**ಲಕ್ಷಾಂತರ ಕಾರ್ಯಕರ್ತರ ಹೋರಾಟದಿಂದ ಬಲಿಷ್ಠವಾಗಿರುವ ಬಿಜೆಪಿಯನ್ನು ಯಾವುದೋ ಒಂದು ಕುಟುಂಬಕ್ಕೆ ಸೀಮಿತಗೊಳಿಸಿ, ಶಿಥಿಲಗೊಳಿಸಲು ಸಾಧ್ಯವಿಲ್ಲ. ಅದಕ್ಕಾಗಿಯೇ ನಾನು ಬಂಡಾಯವಾಗಿ ಸ್ಪರ್ಧಿಸಿದ್ದೇನೆ ಎಂದು ಶಿವಮೊಗ್ಗ ಬಂಡಾಯ ಅಭ್ಯರ್ಥಿ ಕೆ.ಎಸ್. ಈಶ್ವರಪ್ಪ ಸ್ಪಷ್ಟಪಡಿಸಿದ್ದಾರೆ. 'ವಿಶ್ವವಾಣಿ'ಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಬಂಡಾಯ ಸ್ಪರ್ಧೆಗೆ ಕಾರಣ, ಕುಟುಂಬ ರಾಜಕಾರಣ, ಮೋದಿ ಫೋಟೋ ಬಳಕೆ, ಚುನಾವಣೆಗೆ ಸ್ಪರ್ಧಿಸುವ ಹಿಂದಿನ ಉದ್ದೇಶ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಸುದೀರ್ಘವಾಗಿ ಮಾತನಾಡಿದ್ದಾರೆ. ಸಂದರ್ಶನದ ಪೂರ್ಣಪಾಠ ಇಲ್ಲಿದೆ.**

# ಕುಟುಂಬಕ್ಕಾಗಿ ಕಾರ್ಯಕರ್ತರ ಬಲಿ ಒಪ್ಪಲ್ಲ

**ವಿಶ್ವವಾಣಿ ಸಂದರ್ಶನ**
**ಹೆಗ್ಗೆರೆ ರೇಣುಕಾರಾಧ್ಯ, ಶಿವಮೊಗ್ಗ**


- **ದಶಕದ ಒಡನಾಟವಿರುವ ಬಿಜೆಪಿ ವಿರುದ್ಧವೇ ಸ್ಪರ್ಧಿಸಿರುವುದಕ್ಕೆ ಬೇಸರವಿಲ್ಲವೇ?**

ಮೂವರೇ ದಶಕದಿಂದ ಪಕ್ಷದ ಸಿದ್ಧಾಂತಗಳನ್ನು ಚಾಚೂ ತಪ್ಪದೇ ಪಾಲಿಸಿಕೊಂಡು ಬಂದವನು ನಾನು. ಯಾವತ್ತೂ ಪಕ್ಷದ ವಿರುದ್ಧವಾಗಿ ಹೋಗಿಲ್ಲ. ಆದರೆ, ಪಕ್ಷದೊಳಗೆ ಸಿದ್ಧಾಂತಗಳನ್ನು ತುಳಿಯುವ ಯತ್ನ ಮಾಡುತ್ತಿದ್ದಾರೆ ಎಂದು ಗೊತ್ತಾಗಿಯೂ ಸುಮ್ಮನಿರಲು ಸಾಧ್ಯವಾಗಲಿಲ್ಲ. ಪಕ್ಷ ಒಂದು ಕುಟುಂಬಕ್ಕೆ ಸೀಮಿತವಾಗಿಲ್ಲ. ಸಾವಿರಾರು ಕಾರ್ಯಕರ್ತರು ಕಟ್ಟಿ ಬೆಳೆಸಿದ್ದಾರೆ. ಅವರ ತ್ಯಾಗದ ಪರಿಶ್ರಮಗಳಿಂದಲೇ ಪಕ್ಷ ಅಧಿಕಾರಕ್ಕೆ ಬಂದದ್ದು. ಅದನನು ಮರೆತು ಪಕ್ಷವನ್ನೇ ಶಿಥಿಲ ಮಾಡಲು ಹೊರಟವರ ವಿರುದ್ಧ ನನ್ನ ಸ್ಪರ್ಧೆ ಎಂಬುದನ್ನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಪಕ್ಷ ಉಳಿಸುವುದು ಹಾಗೂ ಅದನ್ನು ಕುಟುಂವೊಂದರ ಹಿಡಿತದಿಂದ ಮುಕ್ತ ಮಾಡುವುದೇ ನನ್ನ ಸ್ಪರ್ಧೆಯ ಅಂತಿಮ ಗುರಿ.

- **ಪಕ್ಷ ಶುದ್ಧೀಕರಣವಾಗಬೇಕೆಂದು ಈಗ ಅನಿಸಿದ್ದೇಕೆ?**

ನಾನು ಈಗ ಇದನ್ನು ಬಹಿರಂಗವಾಗಿ ಹೇಳಿದ್ದೇನೆ ಅಷ್ಟೇ. ಎಷ್ಟೋ ಬಾರಿ ಪಕ್ಷದ ವೇದಿಕೆಯಲ್ಲಿಯೇ ಪ್ರಸ್ತಾಪ ಮಾಡಿದ್ದೇನೆ. ಪಕ್ಷದ ಹಿರಿಯ ನಾಯಕರು ಕೆಲವು ಭ್ರಮೆಗಳಲ್ಲಿ ಬದುಕುತ್ತಿದ್ದಾರೆ. ಒಂದು ಜಾತಿ ಅಥವಾ ಸಮುದಾಯ ಬಿಜೆಪಿಯನ್ನು ರಾಜ್ಯದಲ್ಲಿ ಬೆಳೆಸಿಲ್ಲ. ಎಲ್ಲ ಸಮುದಾಯಗಳು ಒಟ್ಟಾಗಿ ನಿಂತು ಬಿಜೆಪಿಯ ಸಿದ್ಧಾಂತಗಳನ್ನು ಬೆಂಬಲ ನೀಡಿವೆ. ಅದನ್ನೇ ನಾನು ಹಲವು ಬಾರಿ ಹೇಳಿದ್ದೇನೆ. ಪಕ್ಷದ ನಾಯಕರಿಗೆ ಮನವರಿಕೆ ಮಾಡುವ ಪ್ರಯತ್ನ ಮಾಡಿದ್ದೇನೆ. ಯಡಿಯೂರಪ್ಪನವರಿಂದಲೇ ಬಿಜೆಪಿ ಅಧಿಕಾರಕ್ಕೆ ಬಂತು. ಅವರಿಲ್ಲದಿದ್ದರೇ ರಾಜ್ಯದಲ್ಲಿ ಬಿಜೆಪಿ ಇರುತ್ತಿಲ್ಲಿಲ್ಲ ಎಂಬ ಭ್ರಮೆ ಏಕೆ? ಸಾವಿರಾರು ಹಿಂದೂ ಕಾರ್ಯಕರ್ತರು ಪಕ್ಷವನ್ನು ಕಟ್ಟಲು ಶ್ರಮ ಪಟ್ಟಿಲ್ಲವೇ. ಅವರ ಶ್ರಮಕ್ಕೆ ಬೆಲೆ ಇಲ್ಲವೇ? ಕೇಲವ ಯಡಿಯೂರಪ್ಪ ಮತ್ತು ಅವರ ಕುಟುಂಬದವರು ಮಾತ್ರ ಕಷ್ಟಪಟ್ಟು ಪಕ್ಷ ಕಟ್ಟಿದ್ದಾರೆಯೇ?. ಯಡಿಯೂರಪ್ಪ ಹಠಕ್ಕೆ ಬಿದ್ದು ತಮ್ಮ ಮಗನನ್ನು ರಾಜ್ಯಾಧ್ಯಕ್ಷನನ್ನಾಗಿ ಮಾಡಿದರು. ಇನ್ನೊಬ್ಬ ಮಗ ಮತ್ತೆ ಸಂಸದನಾಗಬೇಕು ಎಂದು ಓಡಾಡುತ್ತಿದ್ದಾರೆ. ಎಲ್ಲವೂ ಅವರ ಕುಟುಂಬಕ್ಕೆ ಕೊಟ್ಟರೇ ಪಕ್ಷಕ್ಕೆ ದುಡಿದವರು ಎಲ್ಲಿಗೆ ಹೋಗಬೇಕು? ಇದಕ್ಕಾಗಿಯೇ ನಾನು ಪಕ್ಷ ಶುದ್ಧೀಕರಣವಾಗಬೇಕು ಎಂದು ಹೇಳುತ್ತಿದ್ದೇನೆ. ಶಿವಮೊಗ್ಗದಲ್ಲಿ ನಾನು ಗೆದ್ದರೇ ಪಕ್ಷದಲ್ಲಿ ನನ್ನ ಬೆಂಬಲಿಸುವ ಮುಖಂಡರೇ ಶುದ್ಧೀಕರಣಕ್ಕೆ ಮುಂದಾಗುತ್ತಾರೆ ಎಂಬ ವಿಶ್ವಾಸವಿದೆ.

### ಜಿಲ್ಲೆಯ ಜನರಿಗೆ ನಿಮ್ಮ ಆಶ್ವಾಸನೆ ಏನು?



ಜಿಲ್ಲೆಯ ಜ್ವಲಂತ ಸಮಸ್ಯೆಗಳು ಏನು ಎಂಬುದು ನನಗೆ ಚೆನ್ನಾಗಿ ಗೊತ್ತು. ಏಕೆಂದರೆ ಇದೇ ನೆಲದಿಂದಲೇ ನಾನು ರಾಜಕಾರಣವನ್ನು ಮೂವರೂವರೆ ದಶಕಗಳಿಂದ ಮಾಡುತ್ತಲೇ ಬಂದಿದ್ದೇನೆ. ಈಗಲೂ ಹಳ್ಳಿ ಹಳ್ಳಿಗೆ ಹೋದರೆ ಜನರು ನೂರಾರು ಸಮಸ್ಯೆಗಳನ್ನು ಹೇಳುತ್ತಿದ್ದಾರೆ. ಹಾಗಾದರೆ ಹಿಂದಿನ ಸಂಸದರು ಏನು ಮಾಡಿಲ್ಲವೇ? ಎಂಬ ಪ್ರಶ್ನೆಗೆ ಅವರಲ್ಲಿ ಉತ್ತರವಿಲ್ಲ. ಕೆಲವರನ್ನು ಹಿಂದಿಟ್ಟುಕೊಂಡು ಓಡಾಡಿದರೆ ಅದು ಅಭಿವೃದ್ಧಿಯಲ್ಲ. ಜನರ ನೋವುಗಳಿಗೆ ಧ್ವನಿಯಾಗಬೇಕಾಗಿದೆ. ಜಿಲ್ಲೆಯಲ್ಲಿ ಅಂತಹ ನೋವುಗಳು ಸಾವಿರಾರು ಇದೆ. ಅದಕ್ಕೆ ಮೊದಲು ಪರಿಹಾರ ಕಂಡುಕೊಳ್ಳಬೇಕಾಗಿದೆ. ಇಡೀ ಲೋಕಸಭಾ ಕ್ಷೇತ್ರದ ಜನರ ಆಶೋತ್ತರಗಳನ್ನು ಈಡೇರಿಸಲು ಕಂಕಣಬದ್ಧನಾಗಿ ದುಡಿಯುತ್ತೇನೆ.

- **ಕುಟುಂಬ ರಾಜಕಾರಣಕ್ಕೆ ನಿಮ್ಮ ವಿರೋಧವೇ?**

ಮೊದಲಿನಿಂದಲೂ ನಮ್ಮ ಪ್ರಧಾನಿ ಮೋದಿ ಅವರು ಹೇಳುತ್ತಾ ಬಂದಿದ್ದಾರೆ. ಕಾಂಗ್ರೆಸ್ ಕುಟುಂಬ ರಾಜಕಾರಣದಿಂದ ದೇಶವನ್ನು ಮುಕ್ತ ಮಾಡಬೇಕು. ಒಂದೇ ಕುಟುಂಬದವರು ಈ ದೇಶವನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದನ್ನು ತಪ್ಪಿಸಬೇಕು ಎಂಬುದು ಅವರ ಶಪಥ. ಅದಕ್ಕಾಗಿಯೇ ಕಳೆದ ಹತ್ತು ವರ್ಷಗಳಿಂದಲೂ ಅವರ ಪ್ರಧಾನಿಯಾಗಿ ದೇಶವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸುತ್ತಿದ್ದಾರೆ. ಬಿಜೆಪಿಯಲ್ಲಿ ಕಾಂಗ್ರೆಸ್‌ನಂತ ಪರಿಸ್ಥಿತಿ ಇರಲು ಸಾಧ್ಯವೇ ಇಲ್ಲ, ಏಕೆಂದರೆ ನಾವು ಸಿದ್ಧಾಂತಕ್ಕಾಗಿ ದೇಶಕ್ಕೆ ಪ್ರಾಣ ತ್ಯಾಗ ಮಾಡಲು ಸಿದ್ಧವಿರುವ ಜನ. ಆದರೆ, ಈಗ ಬಿಜೆಪಿಯಲ್ಲಿ ಕುಟುಂಬದ ಹಿಡಿತ ಆರಂಭವಾಗಿದೆ. ಯಡಿಯೂರಪ್ಪನವರು ಕಾಂಗ್ರೆಸ್ ಕುಟುಂಬ ರಾಜಕಾರಣದ ಬಗ್ಗೆ ಆರೋಪ ಮಾಡುತ್ತಲೇ ಬೆಳೆದವರು. ಈಗ ಅವರೇನು ಮಾಡುತ್ತಿದ್ದಾರೆ? ಇವರು ಅಧಿಕಾರವೆಲ್ಲವೂ ನಮ್ಮ ಮನೆಯಲ್ಲಿಯೇ ಇರಲಿ ಎಂಬ ನಿಲುವು ಸರಿಯೇ?. ಇದು ಸರಿಯಲ್ಲ ಎಂದು ನಮ್ಮ ನಾಯಕರು ಅನೇಕ ಬಾರಿ ಮನವರಿಕೆ ಮಾಡಲು ಯತ್ನ ಮಾಡಿದ್ದಾರೆ. ಆದರೂ, ಯಡಿಯೂರಪ್ಪ ನವರು ಪಕ್ಷ ತಮ್ಮ ಕುಟುಂಬದ ಹಿಡಿತದಲ್ಲಿಯೇ ಇರಬೇಕು ಎಂಬ ಆಸೆ ಹೊಂದಿದ್ದಾರೆ. ಕುಟುಂಬವೇ ಪಕ್ಷವಲ್ಲ, ಪಕ್ಷ ಎಲ್ಲರಿಗೂ ಸೇರಿದ್ದು ಎಂಬುದು ಅವರಿಗೆ ಮನವರಿಕೆ ಮಾಡಲೆಂದೇ ಚುನಾವಣೆಗೆ ನಿಂತಿದ್ದೇನೆ.

- **ನಿಮ್ಮ ಪುತ್ರನಿಗೆ ಹಾವೇರಿಯಲ್ಲಿ ಪೂರಕ ವಾತವರಣವಿರಲಿಲ್ಲ ಎಂಬ ಮಾತಿದೆ ನಿಜವೇ?**

ಯಾರು ಹೇಳಿದ್ದು? ವಿಧಾನಸಭೆ ಚುನಾವಣೆಗೆ ಸ್ಪರ್ಧೆ ಬೇಡ ಎಂದು ವರಿಷ್ಠರು ನನಗೆ ಸೂಚನೆ ನೀಡಿದಾಗ, ಸಕ್ರಿಯ ಚುನಾವಣಾ ರಾಜಕಾರಣದಿಂದ ಹಿಂದೆ ಸರಿದು ನನ್ನ ಮಗನಿಗೆ ಅನುಕೂಲ ಮಾಡಿಕೊಡಿ ಎಂದು ಹೇಳಿದೆ. ಲೋಕಸಭೆಯಲ್ಲಿ ಹಾವೇರಿಯಿಂದ ಪಕ್ಷ ಟಿಕೆಟ್ ನೀಡಬೇಕು ಎಂದು ಕೋರಿದೆ. ಅದಕ್ಕೆ ಯಡಿಯೂರಪ್ಪನವರೇ ಒಪ್ಪಿದರು. ಕಳೆದ ಮೂರ‍್ನಾಲ್ಕು ವರ್ಷಗಳಿಂದಲೂ ಹಾವೇರಿಯಲ್ಲಿ ಎಲ್ಲ ಮುಖಂಡರೊಂದಿಗೆ ಕಾಂತೇಶ ಒಡನಾಟ ಇಟ್ಟುಕೊಂಡಿದ್ದಾರೆ. ಗ್ರಾಮ ಗ್ರಾಮಗಳನ್ನು ಸುತ್ತಿ ಕೆಲಸಗಳನ್ನು ಮಾಡಿದ್ದಾರೆ. ಬಿಜೆಪಿ ಕಾಂತೇಶ ಅವರಿಗೆ ಟಿಕೆಟ್ ನೀಡುತ್ತದೆ ಎಂಬ ಭರವಸೆಯಲ್ಲಿಯೇ ಅಲ್ಲಿನ ಮುಖಂಡರು ಕೆಲಸ ಮಾಡುತ್ತಿದ್ದರು. ಇಷ್ಟು ಪೂರಕ ವಾತಾವರಣ ನೋಡಿಯೇ ಕಾಂತೇಶನಿಗೆ ಟಿಕೆಟ್ ನೀಡಲು ಯಡಿಯೂರಪ್ಪನವರು ಕೇಂದ್ರ ನಾಯಕರಿಗೆ ಶಿಫಾರಸು ಮಾಡಿದ್ದು. ಅವರಿಗೆ ಗೊತ್ತಿತ್ತು. ಹಾವೇರಿಯಲ್ಲಿ ಕಾಂತೇಶನಿಗೆ ಟಿಕೆಟ್ ಕೊಟ್ಟರೇ ಗೆಲ್ಲುತ್ತಾರೆ ಎಂದು. ತಮ್ಮ ಕುಟುಂಬ ಬಿಟ್ಟು ಬೇರೆಯವರು ಪಕ್ಷದಲ್ಲಿ ಬೆಳೆಯುವುದು ಅವರಿಗೆ ಬೇಕಾಗಿಲ್ಲ. ಅದಕ್ಕಾಗಿಯೇ ನನ್ನ ಮಗನಿಗೆ ಟಿಕೆಟ್ ತಪ್ಪಿಸಿದರು. ಗೆಲ್ಲುವ ಅಭ್ಯರ್ಥಿಯಾಗಿರದಿದ್ದರೇ ನಾನು ಇಷ್ಟು ಹಠಕ್ಕೆ ಬೀಳುವ ಅಗತ್ಯವಿರಲಿಲ್ಲ.

- **ನಿಮ್ಮ ಹೋರಾಟ ಕಮಲದ ಚಿಹ್ನೆ ವಿರುದ್ಧವೋ ಅಥವಾ ಅಭ್ಯರ್ಥಿಯ ವಿರುದ್ಧವೋ?**

ನನ್ನ ಹೋರಾಟವೇದ್ದರೂ ಬಿಜೆಪಿಯ ಸಿದ್ಧಾಂತವನ್ನು ಕುಟುಂಬದ ಹಿಡಿತದಿಂದ ಬಿಡಿಸುವುದೇ ಆಗಿರುತ್ತದೆ. ಇಲ್ಲಿ ಪಕ್ಷ ಅಥವಾ ಅಭ್ಯರ್ಥಿ ಮುಖ್ಯವೇ ಆಗುವುದಿಲ್ಲ, ಒಂದು ಕುಟುಂಬ ಪಕ್ಷವನ್ನು ನಿಯಂತ್ರಣ ಮಾಡುವುದನ್ನು ನಾನು ವಿರೋಧಿಸುತ್ತೇನೆ. ಯಡಿಯೂರಪ್ಪನವರು ತಮಗೆ ಬೇಕಾದವರಿಗೆ ಮಾತ್ರ ಟಿಕೆಟ್ ಕೊಡಿಸುತ್ತಾರೆ ಎಂದಾದರೇ ಪಕ್ಷ ಇವರ ಮನೆಯ ಆಸ್ತಿಯೇ. ಇದು ಲಕ್ಷಾಂತರ ಮಂದಿ ಕಾರ್ಯಕರ್ತರು ಕಟ್ಟಿದ ಪಕ್ಷ. ದುರಾಸೆಗೆಂದು ಪಕ್ಷವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡು ಅದನ್ನು ನಿರ್ನಾಮ ಮಾಡಲು ಬಿಡುವುದಿಲ್ಲ. ಪಕ್ಷದ ಹಿರಿಯರಿಗೆ ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ನನಗೆ ಇಲ್ಲಿ ಪಕ್ಷದ ಅಭ್ಯರ್ಥಿ ಮುಖ್ಯವಾಗುವುದಿಲ್ಲ, ಬದಲಾಗಿಯೇ ಅವರ ಮನೋಭಾವನೆಗಳಿಂದ ಪಕ್ಷದವನ್ನು ಹೊರ ತರಬೇಕಾಗಿದೆ ಅದಕ್ಕಾಗಿ ಸ್ಪರ್ಧೆ ಮಾಡಿದ್ದೇನೆ.

- **ಬಂಡಾಯವಾಗಿದ್ದರೂ ಮೋದಿ ಫೋಟೊ ಬಳಸಿಕೊಳ್ಳುತ್ತಿರುವುದೇಕೆ?**

ಮೋದಿ ವಿಶ್ವನಾಯಕ ಅವರ ಭಾವಚಿತ್ರ ಬಳಸಿಕೊಳ್ಳಲು ಯಾರ ಅನುಮತಿ ಏಕೆ? ಅವರು ಸಿದ್ಧಾಂತದ ಮೇಲೆ ರಾಜಕಾರಣ ಮಾಡುತ್ತಿರುವವರು. ಅವರೇ ನಮಗೆ ಆದರ್ಶ. ದೇಶದಲ್ಲಿ ಹಿಂದುತ್ವ ಹಾಗೂ ಅಭಿವೃದ್ಧಿಯ ಕಲ್ಪನೆ ಇರುವ ಅಪರೂಪದ ನಾಯಕ. ಅವರ ಭಾವಚಿತ್ರ ಬಳಸಿಕೊಳ್ಳುತ್ತೇನೆ. ಅದನ್ನು ಪ್ರಶ್ನೆ ಮಾಡಲು ಬಿಜೆಪಿಯ ಯಾವ ನಾಯಕನಿಗೂ ಹಕ್ಕಿಲ್ಲ. ಮೋದಿ ಅವರು ನನ್ನ ಹೃದಯದಲ್ಲಿದ್ದಾರೆ. ಬಿಜೆಪಿಯ ಶುದ್ಧೀಕರಣ ಆರಂಭವಾಗುವುದೇ ನನ್ನ ಗೆಲುವಿನ ಮೂಲಕ. ಅನಂತರ ಮೋದಿ ಅವರನ್ನು ಭೇಟಿ ಮಾಡಿ ಸಂಸತ್ತಿನಲ್ಲಿ ಬೆಂಬಲ ಘೋಷಣೆ ಮಾಡುತ್ತೇನೆ.

- **ಹಾವೇರಿಯಲ್ಲಿ ಟಿಕೆಟ್ ಸಿಗಲಿಲ್ಲವೆಂದು ಶಿವಮೊಗ್ಗದಲ್ಲಿ ಸ್ಪರ್ಧೆ ಏಕೆ?**

ಇದು ನನ್ನ ಜಿಲ್ಲೆ. ನಾನು ಜಿಲ್ಲೆಯ ನಾಯಕ. ಇಲ್ಲಿಯ ಅಭಿವೃದ್ಧಿಗಾಗಿ ಕೆಲಸ ಮಾಡಿದ್ದೇನೆ. ಕಾಂತೇಶ ಹಾವೇರಿಯಿಂದ ಸ್ಪರ್ಧೆ ಮಾಡಬೇಕು ಎಂದಾಗ ಅಲ್ಲಿಯ ಜನರೊಂದಿಗೆ ಕೆಲಸ ಮಾಡುತ್ತಿದ್ದರು. ಅದಕ್ಕಾಗಿ ಅಲ್ಲಿಯ ಟಿಕೆಟ್ ಕೇಳಿದೆ. ಅದನ್ನು ತಪ್ಪಿಸಿದ ಯಡಿಯೂರಪ್ಪನವರಿಗೆ ನಿಜವಾದ ರಾಷ್ಟ್ರಭಕ್ತರ ಶಕ್ತಿ ತೋರಿಸಬೇಕಲ್ಲ. ಅಷ್ಟಕ್ಕೂ ಕುಟುಂಬ ಕಾರಣದಿಂದ ಬಿಜೆಪಿ ಮುಳುಗುತ್ತದೆ ಎಂದಾದರೆ ಅದನ್ನು ತಡೆಯಲು ಇದು ಸೂಕ್ತ ಜಾಗ. ಶಿವಮೊಗ್ಗದಲ್ಲಿ ನಾನು ಗೆಲುವು ಸಾಧಿಸಿದರೆ ಯಡಿಯೂರಪ್ಪನವರ ಕುಟುಂಬದಿಂದ ಬಿಜೆಪಿ ಹೊರ ಬರುತ್ತದೆ. ಅದಕ್ಕಾಗಿ ಇಲ್ಲಿ ನನ್ನ ಗೆಲುವು ಮುಖ್ಯ.

- **ಯಡಿಯೂರಪ್ಪನವರ ಕುಟುಂಬ ಹೊರತುಪಡಿಸಿ ನಿಮ್ಮ ಸ್ಪರ್ಧೆಯ ಕುರಿತು ಸಂಘಪರಿವಾರ ಅಥವಾ ಬಿಜೆಪಿಯ ಹಿರಿಯ ನಾಯಕರು ನಿಮ್ಮ ವಿರುದ್ಧ ಮಾತನಾಡುತ್ತಿಲ್ಲ ಅಥವಾ ಪಕ್ಷ ಇನ್ನೂ ನಿಮ್ಮ ಉಚ್ಚಾಟನೆ ಮಾಡಿಲ್ಲವೇಕೆ?**

ಬಿಜೆಪಿಯ ಎಲ್ಲ ನಾಯಕರಿಗೂ ನಾನು ಸ್ಪರ್ಧೆ ಮಾಡಲಿ ಎಂಬ ಒಳ ಆಸೆ ಇದೆ. ಅದಕ್ಕಾಗಿಯೇ ಅವರು ಸುಮ್ಮನಿದ್ದಾರೆ. ಸ್ಪರ್ಧೆ ಮಾಡಿ ಗೆದ್ದರೆ ಬಿಜೆಪಿಯ ಶುದ್ಧೀಕರಣ ಆರಂಭವಾಗುತ್ತದೆ ಎಂಬುದು ಅವರಿಗೂ ಗೊತ್ತಿದೆ. ಎಲ್ಲರಲ್ಲೂ ಅಸಮಾಧಾನ ಇದೆ. ಚಿಕ್ಕಮಗಳೂರು-ಉಡುಪಿಗೆ ಬೇಡವಾದ ಶೋಭಾ ಅವರಿಗೆ ಬೆಂಗಳೂರಿನಲ್ಲಿ ಟಿಕೆಟ್ ಸಿಕ್ಕಿದ್ದು ಹೇಗೆ? ಸಿ.ಟಿ.ರವಿ ಅವರಿಗೆ ಇಲ್ಲದ ಟಿಕೆಟ್, ಪ್ರತಾಪಸಿಂಹ ಅವರಿಗೆ ನೀಡದ ಟಿಕೆಟ್ ಬೇರೆಯವರಿಗೆ ಹೇಗೆ ಸಿಗುತ್ತದೆ ಎಂಬ ಸಂಗತಿಗಳು ಎಲ್ಲರಿಗೂ ಗೊತ್ತಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ 108 ರಿಂದ 66 ಸ್ಥಾನ ಗಳಿಸಲು ಕಾರಣ ಯಾರು ಎಂಬುದು ಕೇಂದ್ರ ನಾಯಕರಿಗೂ ಗೊತ್ತಿದೆ. ಎಲ್ಲ ಅಸಮಾಧಾನಗಳನ್ನು ಅವರೆಲ್ಲರು ಅದುಮಿಟ್ಟುಕೊಂಡು ಸುಮ್ಮನ್ನಿದ್ದಾರೆ. ನಾನು ಮಾತನಾಡುತ್ತಿದ್ದೇನೆ. ಅದಕ್ಕಾಗಿ ಅವರೆಲ್ಲರೂ ನನ್ನ ಬಗ್ಗೆ ಯಾವುದೇ ಮಾತನಾಡದೇ ಬೆಂಬಲ ನೀಡುತ್ತಿದ್ದೇನೆ.

## ಲೋಕಸಭೆ ಅಖಾಡದಲ್ಲಿ ಕೋಟಿ ಕುಳಗಳು

### ಮೃಣಾಲ್ ಹೆಬ್ಬಾಳ್ಕರ್
**ಕಾಂಗ್ರೆಸ್ ಅಭ್ಯರ್ಥಿ**

**ಬೆಳಗಾವಿ:** ಮೃಣಾಲ್ ಹೆಬ್ಬಾಳ್ಕರ್ ಒಟ್ಟು ಆಸ್ತಿ ಮೌಲ್ಯ 13.63 ಕೋಟಿ ರು. 10.01 ಕೋಟಿ ಚರಾಸ್ತಿ, 3.62 ಕೋಟಿ ಸ್ಥಿರಾಸ್ತಿ



ಹೊಂದಿದ್ದಾರೆ. ಮೃಣಾಲ್ ಹೆಬ್ಬಾಳ್ಕರ್ ಕೋಟ್ಯಾಧಿಪತಿ ಆದರೂ ಒಂದೇ ಒಂದು ವಾಹನ ಹೊಂದಿಲ್ಲ. 3.78 ಲಕ್ಷ ಮೌಲ್ಯದ 150 ಗ್ರಾಂ ಚಿನ್ನಾಭರಣ. 4.20 ಕೋಟಿ ಮೌಲ್ಯದ ವಿವಿಧ ಶೇರ್ ಹೊಂದಿದ್ದಾರೆ. 6.16 ಕೋಟಿ ಸಾಲ ಹೊಂದಿದ್ದಾರೆ. ಮೃಣಾಲ್ ಪತ್ನಿ ಹಿತಾ ಹೊಂದಿರುವ ಒಟ್ಟು ಆಸ್ತಿ ಮೌಲ್ಯ 23.55 ಲಕ್ಷ ನಗದು 46,200, ಒಟ್ಟು ಚರಾಸ್ತಿ 23.55 ಲಕ್ಷ ಹೊಂದಿರುವ ಹಿತಾ ಸ್ಥಿರಾಸ್ತಿ ಹೊಂದಿಲ್ಲ, ವಾಹನವೂ ಇಲ್ಲ 12.50 ಲಕ್ಷ ಮೌಲ್ಯದ ಚಿನ್ನ, 2.15 ಲಕ್ಷ ಮೌಲ್ಯದ ಬೆಳ್ಳಿ ಹೊಂದಿರುವ ಹಿತಾ ಯಾವುದೇ ಸಾಲದ ಹೊರೆಯಿಲ್ಲ.

### ಜಗದೀಶ್ ಶೆಟ್ಟರ್
**ಬಿಜೆಪಿ ಅಭ್ಯರ್ಥಿ**

**ಬೆಳಗಾವಿ :** ಜಗದೀಶ್ ಶೆಟ್ಟರ್ ಒಟ್ಟು ಆಸ್ತಿ ಮೌಲ್ಯ 12.45 ಕೋಟಿ . ಚರಾಸ್ತಿ 2.63 ಕೋಟಿ, ಸ್ಥಿರಾಸ್ತಿ 9.82 ಕೋಟಿ . ಸಾಲ



– 57.26 ಲಕ್ಷ, ಹಾಗೂ 15.37 ಲಕ್ಷ ನಗದು ಹೊಂದಿದ್ದಾರೆ. 43.94 ಲಕ್ಷ ಮೌಲ್ಯದ ಚಿನ್ನಾಭರಣ ಇದ್ದು ಇವರ ಬಳಿ ಸ್ವಂತ ವಾಹನ ಇಲ್ಲ.

ಶೆಟ್ಟರ್ ಪತ್ನಿ ಶಿಲ್ಪಾ ಶೆಟ್ಟರ್ ಹೆಸರಿನಲ್ಲಿ 2.50 ಲಕ್ಷ ನಗದು ಚರಾಸ್ತಿ 91.10 ಲಕ್ಷ , ಸ್ಥಿರಾಸ್ತಿ 1ಲಕ್ಷ ಹಾಗೂ 14.40 ಲಕ್ಷ ಸಾಲ ಇದೆ. 70.90 ಲಕ್ಷ ಮೌಲ್ಯದ 1.100 ಕೆಜಿ. ಚಿನ್ನ, 3 ಕೆಜಿ. ಬೆಳ್ಳಿ ಜಗದೀಶ್ ಶೆಟ್ಟರ್ ಹೊಂದಿದ್ದಾರೆ.

### ಸಂಯುಕ್ತಾ ಪಾಟೀಲ
**ಕಾಂಗ್ರೆಸ್ ಅಭ್ಯರ್ಥಿ**



**ಬಾಗಲಕೋಟೆ:** ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತಾ ಪಾಟೀಲ ಸೋಮವಾರ ನಾಮಪತ್ರ ಸಲ್ಲಿಸಿದರು. ಒಟ್ಟು 2.92 ಕೋಟಿ ಆಸ್ತಿ ಹೊಂದಿದ್ದು, 93.66 ಲಕ್ಷ ಚರಾಸ್ತಿ, 1.99 ಕೋಟಿ ಸ್ಥಿರಾಸ್ತಿ ಹೊಂದಿದ್ದಾರೆ. 3.09 ಲಕ್ಷ ಸಾಲ ಹೊಂದಿದ್ದು, 500 ಗ್ರಾಂ ಚಿನ್ನ, 5 ಕೆಜಿ ಬೆಳ್ಳಿ ಹೊಂದಿದ್ದಾರೆ. ಇವರ ಹೆಸರಿನಲ್ಲಿ ಯಾವುದೇ ವಾಹನ ಹೊಂದಿಲ್ಲ, ಮುಹೂರ್ತ ಚೆನ್ನಾಗಿದೆ ಎಂದು ಸೋಮವಾರ ಬೆರಳೆಣಿಕೆಯ ಮುಖಂಡರೊಂದಿಗೆ ಬಂದು ನಾಮಪತ್ರ ಸಲ್ಲಿಸಿದರು.

### ಅಣ್ಣಾಸಾಹೇಬ್ ಜೊಲ್ಲೆ
**ಬಿಜೆಪಿ ಅಭ್ಯರ್ಥಿ**


**ಚಿಕ್ಕೋಡಿ:** ಸಂಸದ ಅಣ್ಣಾಸಾಹೇಬ್ ಜೊಲ್ಲೆ ಒಟ್ಟು ಆಸ್ತಿ ಮೌಲ್ಯ 21.62 ಕೋಟಿ . 1.25 ಲಕ್ಷ ನಗದು ಹೊಂದಿರುವ



ಜೊಲ್ಲೆ 5.83 ಕೋಟಿ ಚರಾಸ್ತಿ,15.79 ಕೋಟಿ ಸ್ಥಿರಾಸ್ತಿ ಇದೆ. 67.68 ಲಕ್ಷ ಮೌಲ್ಯದ ಐದು ಕಾರು, 3 ದ್ವಿಚಕ್ರವಾಹನಗಳಿವೆ. 1.08 ಕೋಟಿ ಮೌಲ್ಯದ ಚಿನ್ನಾಭರಣ ಹಾಗೂ 12.40 ಕೋಟಿ ಸಾಲ ಹೊಂದಿದ್ದಾರೆ. ಇವರ ವಿರುದ್ಧ ಯಾವುದೇ ಅಪರಾಧ ಪ್ರಕರಣಗಳಿಲ್ಲ. ಪತ್ನಿ, ನಿಪ್ಪಾಣಿ ಶಾಸಕಿ ಶಶಿಕಲಾ ಜೊಲ್ಲೆ ಒಟ್ಟು ಆಸ್ತಿಯ ಮೌಲ್ಯ 29.56 ಕೋಟಿ. ನಗದು 1.10 ಲಕ್ಷ, ಒಟ್ಟು ಚರಾಸ್ತಿ 4.14 ಕೋಟಿ ಸ್ಥಿರಾಸ್ತಿ 25.42 ಕೋಟಿ ಆಸ್ತಿ ಹೊಂದಿದ್ದು ಶಾಸಕಿ ಜೊಲ್ಲೆ ಯಾವುದೇ ವಾಹನ ಹೊಂದಿಲ್ಲ. 86.61 ಲಕ್ಷ ಮೌಲ್ಯದ ವಜ್ರ, ಚಿನ್ನ, ಬೆಳ್ಳಿ ಆಭರಣ ಹೊಂದಿದ್ದಾರೆ.

### ಪ್ರಲ್ಹಾದ ಜೋಶಿ
**ಬಿಜೆಪಿ ಅಭ್ಯರ್ಥಿ**

**ಧಾರವಾಡ:** ಬಿಜೆಪಿಯಿಂದ ಲೋಕಸಭಾ ಚುನಾವಣೆಗೆ ಐದನೇ ಬಾರಿಗೆ ಸ್ಪರ್ಧಿಸಿರುವ ಸಚಿವ ಪ್ರಲ್ಹಾದ ಜೋಶಿ ಅವರು



13.97 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದಾರೆ. ಸತತ ನಾಲ್ಕು ಬಾರಿ ಆಯ್ಕೆಯಾಗಿರುವ ಅವರಿಗೆ ಸ್ವಂತ ವಾಹನ ಇಲ್ಲ. ಜೋಶಿ ಅವರ ಬಳಿ 184 ಗ್ರಾಂ ಚಿನ್ನ 5 ಕೆ.ಜಿ ಬೆಳ್ಳಿ, ಅವರ ಪತ್ನಿ ಬಳಿ 500 ಗ್ರಾಂ ಚಿನ್ನ, 2 ಕೆ.ಜಿ ಬೆಳ್ಳಿ ಇದೆ. ಜೋಶಿ ಅವರ ಹೆಸರಿನಲ್ಲಿ 6.63 ಕೋಟಿ ಹಾಗೂ ಪತ್ನಿ ಹೆಸರಿನಲ್ಲಿ 1.37 ಕೋಟಿ ಸಾಲ ಇದೆ. ಪತ್ನಿ ಜ್ಯೋತಿ ಅವರ ಒಟ್ಟು ಆಸ್ತಿಯ ಮೌಲ್ಯ 6.80 ಕೋಟಿ ಎಂದು ನಾಮಪತ್ರದ ಜತೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ವಿವರ ಘೋಷಿಸಿಕೊಂಡಿದ್ದಾರೆ.

## ಕಾಂಗ್ರೆಸ್ ಗ್ಯಾರಂಟಿಗಳು ಚುನಾವಣೆವರೆಗೆ ಮಾತ್ರ

**ಬೆಂಗಳೂರು:** ಚುನಾವಣೆ ಕಾರಣಕ್ಕಾಗಿ ಸಾಲ ತಂದು ಗ್ಯಾರಂಟಿ ಯೋಜನೆಗೆ ವಿನಿಯೋಗ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ನೀಡುತ್ತಿರುವ ಗ್ಯಾರಂಟಿ ಯೋಜನೆಗಳು ಕೇವಲ ಲೋಕಸಭಾ ಚುನಾವಣೆವರೆಗೆ ಮಾತ್ರ ಇರಲಿವೆ ಎಂದು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಆರೋಪಿಸಿದರು.ಮಲ್ಲೇಶ್ವರದ ರಾಜ್ಯ ಬಿಜೆಪಿ ಚುನಾವಣೆ ಮಾಧ್ಯಮ ಕೇಂದ್ರದಲ್ಲಿಮಾತನಾಡಿ, ರಾಜ್ಯದಲ್ಲಿ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕಲ್ಯಾಣ ಕರ್ನಾಟಕ ಸಾರಿಗೆ, ವಾಯುವ್ಯ ಸಾರಿಗೆ ಯ ಎಷ್ಟು ಬಸ್ ಓಡ್ತಿವೆ? ಅವುಗಳಲ್ಲಿರುವ ಸಾಮಾನ್ಯ ಸಾರಿಗೆಯಲ್ಲಿ ಮಹಿಳೆಯರಿಗೆ ಉಚಿತ ಬಸ್ ಸೇವೆ ನೀಡಲಾಗುತ್ತಿದೆ. ಆದರೆ ಈ ಬಸ್ ಓಡಿಸಲು, ಡೀಸೆಲ್ ಹಾಕಿಸಲು ಹಾಗೂ ಸಂಬಳ ಕೊಡಲು ದುಡ್ಡು ಎಲ್ಲಿಂದ ತಂದ್ರಿ? ಸಾಲ ತಂದು ಬಸ್ ನಡೆಸುತ್ತಿದ್ದಾರೆ ಎಂದರು.

## ಘಟಾನುಘಟಿ ಅಭ್ಯರ್ಥಿಗಳಿಂದ ನಾಮಪತ್ರ



ಹಾವೇರಿ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಬಸವರಾಜ ಬೊಮ್ಮಾಯಿ ಅವರು ಸೋಮವಾರ ನಾಮಪತ್ರ ಸಲ್ಲಿಸಿದರು.






ಕೇಂದ್ರ ಸಚಿವ, ಬಿಜೆಪಿ ಅಭ್ಯರ್ಥಿ ಪ್ರಲ್ಹಾದ್ ಜೋಶಿ ಅವರು ಸೋಮವಾರ ಧಾರವಾಡ ಲೋಕಸಭಾ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದರು.



ಬಾಗಲಕೋಟೆ ಲೋಕಸಭಾ ಮತಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತಾ ಪಾಟೀಲ ಸೋಮವಾರ ನಾಮಪತ್ರ ಸಲ್ಲಿಸಿದರು.




ಶಿವಮೊಗ್ಗ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೀತಾ ಶಿವರಾಜಕುಮಾರ ಸೋಮವಾರ ನಾಮಪತ್ರ ಸಲ್ಲಿಸಿದರು.




ಬೆಳಗಾವಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಮೃಣಾಲ್ ಹೆಬ್ಬಾಳ್ಕರ್ ಸೋಮವಾರ ನಾಮಪತ್ರ ಸಲ್ಲಿಸಿದರು.



ಚಿಕ್ಕೋಡಿ ಲೋಕಸಭಾ ಬಿಜೆಪಿ ಅಭ್ಯರ್ಥಿ ಅಣ್ಣಾಸಾಹೇಬ್ ಜೊಲ್ಲೆ ಸೋಮವಾರ ನಾಮಪತ್ರ ಸಲ್ಲಿಕೆ ಮಾಡಿದರು.



ಹಾವೇರಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಆನಂದ ಸ್ವಾಮಿ ಗಡ್ಡದೇವರ ಮಠ ಸೋಮವಾರ ನಾಮಪತ್ರ ಸಲ್ಲಿಸಿದರು.





ಬಿಜೆಪಿ ಅಭ್ಯರ್ಥಿ ಭಗವಂತ ಖೂಬಾ ಅವರು ಬೀದರ್ ನಗರದಲ್ಲಿ ಸೋಮವಾರ ನಾಮಪತ್ರ ಸಲ್ಲಿಸಿದರು.



ಕಳೆದ ಐದು ವರ್ಷಗಳಲ್ಲಿ ಹಲವು ಪ್ರಮುಖ ಯೋಜನೆಗಳನ್ನು ಜಾರಿಗೆ ತರಲು ಸಾಧ್ಯವಾಯಿತು. ಮೆಟ್ರೋ 2ಎ, 2ಬಿ (ವಿಮಾನ ನಿಲ್ದಾಣ ಮಾರ್ಗ) ಹಂತಕ್ಕೆ ಅನುಮೋದನೆ ಮತ್ತು ವಿಸ್ತರಣೆ, ಆರ್.ವಿ ರಸ್ತೆಯಿಂದ ಬೊಮ್ಮಸಂದ್ರದವರೆಗಿನ ಹಳದಿ ಮಾರ್ಗ ಪೂರ್ಣಗೊಳ್ಳುವಿಕೆ ಸೇರಿದಂತೆ ಪ್ರಮುಖ ಮೂಲಸೌಕರ್ಯ ಯೋಜನೆಗಳು ಇದರಲ್ಲಿ ಸೇರಿವೆ.

-ತೇಜಸ್ವಿ ಸೂರ್ಯ, ಸಂಸದ



ಶಿವಮೊಗ್ಗದಲ್ಲಿ ಈಶ್ವರಪ್ಪನವರಿಗೆ, ಚಿತ್ರದುರ್ಗದಲ್ಲಿ ಗೋವಿಂದ ಕಾರಜೋಳ ಅವರನ್ನು ನಾನು ಬೆಂಬಲಿಸುತ್ತೇನೆ. ನಾನು ಸ್ವಯಂ ಪ್ರೇರಿತನಾಗಿ ಬಂದಿದ್ದು ಈಶ್ವರಪ್ಪನವರ ಪರ ಪ್ರಚಾರ ನಡೆಸುತ್ತಿದ್ದೇನೆ. ಜಿಲ್ಲೆಯಲ್ಲಿ ನಮ್ಮ ಭೋವಿ ಸಮಾಜದ 1.50 ಲಕ್ಷ ಮತದಾರರಿದ್ದಾರೆ. ಕೊಲ್ಲೂರು ಭಾಗದಲ್ಲೂ ಸಹ ಇದ್ದಾರೆ. ಚಿತ್ರದುರ್ಗ ಕ್ಷೇತ್ರದಲ್ಲಿ ನಾನು ಯಾವುದೇ ಪಕ್ಷದಲ್ಲಿ ಇಲ್ಲ.

- ಗೂಳಿಹಟ್ಟಿ ಶೇಖರ್ , ಮಾಜಿ ಸಚಿವ



10 ವರ್ಷದ ಮೋದಿ ಆಡಳಿತದಲ್ಲಿ ಕೆಲಸ ಆಗಿಲ್ಲ. ಉದ್ಯೋಗ ನೀಡಿಲ್ಲ, ಬೆಲೆ ಏರಿಕೆ ಕೊಡುಗೆ ನೀಡಿದ್ದಾರೆ. ಕಪ್ಪುಹಣ ವೈಟ್ ಮಾಡೋಕೆ ನೋಟ್ ಬ್ಯಾನ್ ಮಾಡಿದರು. ಜನರ ಖಾತೆಗೆ ಹಣ ಹಾಕಲಿಲ್ಲ, ವಿದೇಶದಿಂದ ಕಪ್ಪುಹಣ ತರಲಿಲ್ಲ. ಎಲ್ಲರೂ ಮೋದಿ ಅವರನ್ನು ನಂಬಿದ್ದರು. ಚುನಾವಣೆ ಬಾಂಡ್ ವಿಚಾರದಲ್ಲಿ ಮೋದಿ ಅವರ ಮತ್ತೊಂದು ಮುಖವಾಡ ಬಯಲಾಗಿದೆ.

-ಎಂ.ಬಿ.ಪಾಟೀಲ್ ಸಚಿವ



ಕೇಂದ್ರದ ಮಂತ್ರಿಗಳು ಹಾಗೂ ಸಂಸದರು ಮಹಾದಾಯಿ ವಿಚಾರವಾಗಿ ಗೌಪ್ಯವಾಗಿರುವ ಸಂಗತಿಗಳನ್ನು ಸ್ಪಷ್ಟಪಡಿಸಬೇಕು. ಮಹದಾಯಿ ಬಗ್ಗೆ ಮಾತಾನಾಡಲು ಬಿಜೆಪಿಯವರು ನೈತಿಕ ಹಕ್ಕು ಕಳೆದುಕೊಂಡಿದ್ದಾರೆ. ದೇಶದಲ್ಲಿ ಸತ್ಯವನ್ನು ಮರೆಮಾಚಲು ಹಲವಾರು ಪ್ರತಿಷ್ಠಿತ ವ್ಯಕ್ತಿಗಳು ಪ್ರಯತ್ನ ಮಾಡುತ್ತಿದ್ದಾರೆ.

-ಎಚ್.ಕೆ.ಪಾಟೀಲ, ಸಚಿವ



ಪ್ರಧಾನ ಮಂತ್ರಿ ಮತ್ತು ಮುಖ್ಯ ಮಂತ್ರಿ ಇಬ್ಬರೂ ಅವರವರ ಸ್ಥಾನಮಾನದಲ್ಲಿ ಸಮಾನರು. ಎರಡೂ ಪದವಿಗಳು ಸಮಾನವಾದುದು, ವಯಸ್ಸಿನ ಹಿರಿ-ಕಿರಿತನಗಳು ಪದವಿಗಳಿಗೆ ಅನ್ವಯ ಆಗುವುದಿಲ್ಲ. ಅತಿ ಸಣ್ಣ ವಯಸ್ಸಿಗೆ ಪ್ರಧಾನಿಯಾದ ರಾಜೀವ್ ಗಾಂಧಿ ಇದ್ದಾಗಲೂ ಅವರಿಗಿಂತ ಹಿರಿಯರಾದ ಮುಖ್ಯಮಂತ್ರಿಗಳಿದ್ದರು. ಆಗಲೂ ಪರಸ್ಪರ ಟೀಕೆ-ಟಿಪ್ಪಣಿಗಳು ವಿನಿಮಯ ಆಗುತ್ತಿದ್ದವು.

-ಸಿದ್ದರಾಮಯ್ಯ, ಸಿಎಂ